GOVERNMENT OF MADRAS.

Old Scott. II-28, New Scott. II-16—
71,006—28-1-55.

P.W (1955) Department.

~~Endorsement~~
~~D.O.~~
~~Memorandum~~
Lodged ✓

No. 43342 A/55

Dated 23-6-1955.

Passed
Vks
Srpdt
24-6-55

FURTHER PAPERS.

Department.	Number.	Series.	Date.

PW 43343
27 MAY 1955
PUBLIC DEPARTMENT
25 MAY 1955
GOVERNMENT OF MADRAS

WELCOME ADDRESS

PRESENTED BY

The South Kanara District Board

TO

THE HON'BLE SRI K. KAMARAJ

Chief Minister to the Govt. of Madras.

RESPECTED SIR,

We, the President and members of the South Kanara District Board, extend to you a cordial welcome on this occasion of your first visit to our District. It is with feelings of sincere joy and pride that we greet you, because we see in your person a devoted friend and servant of the people, a common man occupying the highest position in the state. Though this is your first visit to our District, you are no stranger to us. We are all conscious of the unique services rendered by you to our motherland. As early as in 1920, when Gandhiji took up the leadership of the national struggle and started the Non-co-operation movement, you were one of the first to join the fight for freedom. Since then, every phase of the fight for independence found you in the fore-front, suffering every hardship, and undergoing imprisonment every time. Later, in the wake of freedom, as President of the Tamilnad Congress, you had to shoulder the great responsibility of steering the ship of State wisely and safely, and it is a tribute to your state-craft and political acumen that the composite State of Madras had democratic government throughout the years of strain and stress. In the comparatively short period of your office as Chief Minister, you have shown how able a statesman and administrator you are. But more important than all these is the natural sympathy which you have for the backward, the down-trodden, and the less fortunate of our countrymen. It is this quality in you which has endeared you to the vast masses of our people, striking a responsive chord in their hearts. Verily you are a leader among workers and a worker among leaders.

This is probably the first occasion when the Distsrict Board in its long career presents an address to the Chief Minister of the State. We therefore feel that it is our duty to avail of this unique opportunity to place before you some of our problems which call for an early solution with the assistance of the State Government.

A problem which touches intimately the everyday life of a large number of our people is the lack of proper communications in this District. Your tour would have revealed to you how difficult and poor communications are in this District. Though we have 1,500 miles of roads, a great many of them do not connect the interior villages with the more important centres of trade and commerce, as they are intercepted by many streams and rivers, which have neither bridges nor causeways accross them. The physical features of the land, the hills and valleys have added to the difficulties and more miles of roads are required to reach a place on account of this. The Government is giving the Board a small grant for improvement of village communications and under the Post-War road development scheme. These grants are quite inadequate, and in as much as the District Board is not in a position to spend any sum on the construction of new roads, the problem will remain unsolved. We trust our representation will receive due consideration at your hands. You have just laid the foundation for a bridge accross one of the rivers along the coast road. While the bridges accross the three rivers are certainly of great importance, their usefulness would be complete only when the remaining rivers along the coast road are bridged, so that there could be through communication along the whole length of the District in the most thickly populated area.

The finances of the Board are in a crippled condition. With the best of intentions The Board has not been able to meet the demands of the people for more schools and greater facilities for medical relief, because of the chronic deficit in its finances. The buildings in which the Elementary Schools are held are very old and unsuitable. Our constitution requires that within the next five years, every child should attend a school and remain there from 6 to 14 years. This would mean that our Elementary Schools should be extended and many of them raised to the standard of Higher Elementary Schools. It is estimated that Rs 20 lakhs will be required to improve the existing schools and equip them properly. In the matter of secondary education, the Board has not been able to find the finances for starting any of the bifurcated courses of study or improve the existing accomodation. Medical relief requires extension and the District Board has before it requests from 60 centres for opening dispensaries and Maternity and Child welfare centres. Unless the finances of the Board are properly rehabilitated, it will not be able to satisfy any of these demands.

While we are very grateful to the Government for pushing forward with vigour the scheme for supply of electric energy from Mysore, we request that since all the power available may not be consumed within the area covered by the present scheme, the scheme may be extended to cover the entire district.

Our claim for a major port for this District is still under the consideration of the Union Government. We request you to exert your great influence with the Union Government, so that the establishment of a major port will soon be an accomplished fact.

The question of re-organisation of Local Boards has been before the Government from some time. It is necessary to put them on a proper footing so that they become effective instruments to carry out the will of the people in the vast field of Local Administration. The District Board Act and the statutory rules framed under it from time to time, leave little scope for initiative by the local bodies. Unless they are invested with real power and responsibility, they will be in the unevaiable position of rousing hopes and expectations without the means to fulfil them. Whether the District Boards are continued as now or not, it is necessary that they should enjoy a greater amount of autonomy with more control on the departments on whom the efficiency of their administration depends.

We do not wish to weary you with our other problems. We do hope, however, that your tour has shown to you the many needs of this remote part of the state, over whose destinies you preside with such distinction and in the course of time our requests will bear fruit so that this rare visit of yours to our District will be ever remembered by the people.

We sincerely thank you for the great honour you have done us to-day by graciously consenting to accept our address and to be amidst us. Our connection with Tamilnad and its great people is very ancient. Our recent relationship has been cordial. We do not know what our future position will be. We believe however, that you will always have a soft corner in your heart for our District and the people. We hope also that the pleasant memories you carry with you of your rare visit to our Dt. will help to foster the warmth of your heart towards us. We conclude wishing you long years of devoted and ever glorious service to the Motherland and the Madras State.

We remain,

Yours fraternally,

S. K. DT BD. OFFICE,
MANGALORE,
29-4-'55.

THE PRESIDENT & MEMBERS OF
THE SOUTH KANARA DISTRICT BOARD.

P.W(A2)

Please see the address on pgs 1-3 ante
The requests in paras 3, 4 and 7 of the address are for consideration in H.E.L.A Dept. Another copy of the address has been sent to the I Dept for necessary action in this regard.

2 Bridging the remaining along Coast road.
The work of developing the West Coast road in Madras and South ~~dist~~ Kanara districts, as an all weather road by constructing bridges ~~in~~ under execution.
The work of constructing bridges on ~~the~~ Mangalore Baindur Coast roads ~~the work may be expected to be taken up under the Second Five Year Plan~~. across the Uppunda, Mahakal and Kallianpur ~~for~~ rivers is separately under examination under the Special grants in aid scheme of the Govt of India.

A/ 15/6/55

Kew/ 16.6.55

Thro F

Parabor Bank: The question of developing the Mangalore Port with an all weather port or as a major Port is dependent on the model experiments that are being conducted at the central water and Power Research Station, Poona. Necessary action in this regard will be taken after the experiments are over. No action is therefore called for on this request at present.

Dy 20/6

BMS 17/6/55.

17.6.55

Paras 5 & 3 ante :- It has been proposed to extend Jog power to the whole of the South Kanara and extension proposals in this regard are either being evolved or under consideration in the Govt no specific action is called for in

this file..

ub 20655 KD 20655

M 21.6.55 AG

The papers may be lodged.

M 23.6.55

M/6/55

Kum 22.6.55

DEPUTY SECRETARY TO GOVERNMENT
14 MAY 1955
PUBLIC WORKS DEPARTMENT

CHIEF MINISTER
13 MAY 1955
GOVERNMENT OF MADRAS

ಮದ್ರಾಸು ಸರಕಾರದ ಮುಖ್ಯ [illegible]

ಮಾನ್ಯ ಶ್ರೀ। ಕೆ. ಕಾಮರಾಜರವರಿಗೆ

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಅಧ್ಯಕ್ಷರು ಮತ್ತು ಸದಸ್ಯರು -

✦ ಅರ್ಪಿಸುವ ✦

ಮಾನಪತ್ರ

ಮಾನ್ಯ ಮಹನೀಯರೇ,

ನಮ್ಮ ಜಿಲ್ಲೆಗೆ ಇದೀಗ ತಮ್ಮ ಪ್ರಥಮ ಸಂದರ್ಶನ. ಈ ಅಪೂರ್ವ ಸಂದರ್ಭದಲ್ಲಿ, ನಾವು ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಅಧ್ಯಕ್ಷರೂ, ಸದಸ್ಯರೂ ತಮಗೆ ಮಾನಪತ್ರವಿತ್ತು ಗೌರವಿಸಲು ಮನಃಪೂರ್ವಕವಾಗಿ ಆನಂದ ಮತ್ತು ಹೆಮ್ಮೆಪಡುತ್ತೇವೆ. ಯಾಕೆಂದರೆ, ಜನತೆಯ ನಿಜ ಸ್ನೇಹ ಮತ್ತು ನಿಷ್ಕಾಮಂತ ಸೇವೆಯ ಪ್ರತಿಮೂರ್ತಿಯಾಗಿ, ಸಾಮಾನ್ಯರೊಬ್ಬರಾದ ತಾವು ರಾಜ್ಯದ ಅತ್ಯುಚ್ಚ ಸ್ಥಾನವನ್ನು ಅಲಂಕರಿಸಿರುವಿರಿ.

ತಾವು ನಮ್ಮ ಜಿಲ್ಲೆಗೆ ಬರುವುದಿದು ಮೊದಲಬಾರಿಯಾದರೂ, ನಮಗೇನೂ ಅಪರಿಚಿತರಲ್ಲ. ಮಾತೃಭೂಮಿಗಾಗಿ ತಾವು ಸಲ್ಲಿಸಿರುವ ಅಮೂಲ್ಯಸೇವೆಯನ್ನು ನಾವು ಬಲ್ಲೆವು. 1920ರಷ್ಟು ಹಿಂದೆ, ಗಾಂಧೀಜಿಯು ನಮ್ಮ ರಾಷ್ಟ್ರೀಯ ಹೋರಾಟದ ನಾಯಕತ್ವವಹಿಸಿ, ಅಸಹಕಾರ ಚಳವಳಿ ಹೂಡಿದಾಗಲೆ, ಸ್ವಾತಂತ್ರ್ಯಸಮರದಲ್ಲಿ ಭಾಗವಹಿಸಿದ ಮೊದಲಿಗರಲ್ಲಿ ತಾವೊಬ್ಬರು. ಅಂದಿನಿಂದ ಸ್ವಾತಂತ್ರ್ಯ ಹೋರಾಟದ ಪ್ರತಿಯೊಂದು ರಂಗದಲ್ಲಿಯೂ ತಾವು ಮುಂದಾಳಾಗಿನಿಂತು, ಎಂತಹ ಕಷ್ಟಕ್ಕಾದರೂ ಎದೆಗೊಟ್ಟು, ಪ್ರತಿಸಲವೂ ಸಂತೋಷದಿಂದ ಸೆರೆಮನೆ ಸೇರಿರುತ್ತೀರಿ. ತಮಿಳುನಾಡು ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ, ಅಖಿಲ ಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಾಗಿ ದೇಶಕ್ಕೆ ಮಹತ್ವದ ಸೇವೆಸಲ್ಲಿಸಿರುತ್ತೀರಿ.

ಸ್ವಾತಂತ್ರ್ಯಸಾಧನೆಯನಂತರ ಮದ್ರಾಸ್ ರಾಜ್ಯಸರಕಾರದ ನಾವೆಯನ್ನು ತಾವು ಸುರಕ್ಷಿತವಾಗಿ ಮತ್ತು ಚಾತುರ್ಯದಿಂದ ನಡಿಸುವ ಹೊಣೆಹೊತ್ತು ಸಫಲರಾಗಿರುವಿರಿ. ವಿವಿಧ ಪ್ರದೇಶಗಳಿಂದ ಕೂಡಿದ ಮದ್ರಾಸ್ ರಾಜ್ಯದಲ್ಲಿ, ಕಷ್ಟ ಮತ್ತು ಬಿಕ್ಕಟ್ಟಿನ ಗತ ವರ್ಷಗಳಲ್ಲೆಲ್ಲ, ಸಮರ್ಥ ಪ್ರಜಾಸರಕಾರವೇ ಆಡಳಿತ ನಡಿಸಿಕೊಂಡು ಬಂದುದು, ತಮ್ಮ ಮುತ್ಸದ್ದಿತನ ಮತ್ತು ರಾಜನೀತಿಜ್ಞತೆಯನ್ನು ಎತ್ತಿತೋರಿಸುತ್ತದೆ. ಮದ್ರಾಸ್ ರಾಜ್ಯದ ಮುಖ್ಯಮಂತ್ರಿಯಾಗಿ ಆಡಳಿತ ನಡಿಸಿರುವ ಈ ಅಲ್ಪಾವಧಿಯಲ್ಲಿಯೇ, ತಾವು ಎಷ್ಟೊಂದು ದಕ್ಷ ಆಡಳಿತಗಾರ ಮತ್ತು ಚತುರ ಮುತ್ಸದ್ದಿಯೆಂಬುದನ್ನು ವ್ಯಕ್ತಗೊಳಿಸಿರುವಿರಿ. ಆದರೆ ಇವೆಲ್ಲಕ್ಕಿಂತಲೂ ಮಹತ್ವವಾದದೆಂದರೆ, ಹಿಂದುಳಿಮೆ ಪತಿತರಾಗಿರುವ, ದುರ್ದೈವಿಗಳಾಗಿ ಯಾತನೆಪಡುತ್ತಿರುವ ತಮ್ಮ ದೇಶಬಂಧುಗಳ ಕುರಿತು ತಮಗಿರುವ ಸ್ವಾಭಾವಿಕ ಸಹಾನುಭೂತಿ. ಈ ಮಹಾಗುಣದಿಂದಾಗಿಯೇ ತಾವು ವಿಶಾಲ ಜನಸಾಮಾನ್ಯರ ಆತ್ಮೀಯರಾಗಿ ಅವರ ಹೃದಯದಲ್ಲಿ ಸಹಜ ಪ್ರತಿಕ್ರಿಯೆಯನ್ನುಂಟುಮಾಡಿರುತ್ತೀರಿ. ವಾಸ್ತವವಾಗಿಯೂ ತಾವು ಕೆಲಸಗಾರರಲ್ಲೊರ್ವ ನಾಯಕ, ನಾಯಕರಲ್ಲೊರ್ವ ಕೆಲಸಗಾರ.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ದೀರ್ಘ ಜೀವಿತಕಾಲದಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳೊಬ್ಬರಿಗೆ ಮಾನಪತ್ರ ವೀಯುವ ಸಂಯೋಗ ದೊರೆತಿರುವುದು ಪ್ರಾಯಶಃ ಇದೀಗ ಮೊದಲಬಾರಿ. ಅಕಡಮೇಲೆ ಈ ಅಪೂರ್ವ ಸಂದರ್ಭದ ಉಪಯೋಗ ಪಡೆದು, ಮದ್ರಾಸ್ ಸರಕಾರದ ನೆರವಿನಿಂದ ಪರಿಹರಿಸಬೇಕಾದ ನಮ್ಮ ಕೆಲವು ಪ್ರಾಮುಖ್ಯ ಪ್ರಶ್ನೆಗಳನ್ನು, ತಮ್ಮ ಗಮನಕ್ಕೆ ತರುವುದು ನಮ್ಮ ಕರ್ತವ್ಯ.

ನಮ್ಮ ಜಿಲ್ಲೆಯಲ್ಲಿ, ಮುಖ್ಯವಾಗಿ ಹಳ್ಳಿಗಳ ಜನಸಮುದಾಯದ ಅನೇಕ ನಿತ್ಯ ಜೀವನವ್ಯವಹಾರದಲ್ಲಿ, ದೊಡ್ಡ ತಡೆಯಾಗಿ ಬರುವ ವಿಷಯವೆಂದರೆ, ಸರಿಯಾದ ಸಂಚಾರಾನುಕೂಲತೆಯ ಕೊರತೆ. ಜಿಲ್ಲೆಯಲ್ಲಿ ಸಂಚಾರಾನುಕೂಲತೆಯು ಎಷ್ಟೊಂದು ಕಡಿಮೆ ಹಾಗೂ ಕಷ್ಟವಾಗಿರುವುದೆಂಬುದನ್ನು, ಇದೀಗ ಕೆಲವು ದಿನಗಳ ತಮ್ಮ ಜಿಲ್ಲಾ ಸಂಚಾರದಿಂದ ತಾವು ಮನಗಂಡಿರಬಹುದು. ನಮ್ಮಲ್ಲಿ 1500 ಮೈಲುಗಳಷ್ಟರ ರಸ್ತೆಗಳಿರುವನೆಂಬುದೇನೋ ನಿಜ. ಆದರೆ ಅವುಗಳ ನಡುವೆ ನೂರಾರು ನದಿ, ಉಪನದಿ, ಮತ್ತು ತೋಡುಗಳು ಅಡ್ಡವಾಗಿ ಹರಿಯುವುದರಿಂದ, ಒಳಪ್ರದೇಶದ ಹಳ್ಳಿಗಳಿಗೂ, ಜಿಲ್ಲೆಯ ಪ್ರಾಮುಖ್ಯ ವ್ಯಾಪಾರ ವ್ಯವಹಾರಕೇಂದ್ರಗಳಿಗೂ ಸರಿಯಾದ ಸಂಪರ್ಕ ಇಲ್ಲದಂತಾಗಿದೆ. ಸಾಕಷ್ಟು ಸೇತುವೆ-ಸಂಕಗಳಿಲ್ಲದೆ, ಮಳೆಗಾಲದಲ್ಲಿ ಜಿಲ್ಲೆಯ ವಿಶಾಲಪ್ರದೇಶಗಳು ಹೊರ ಸಂಪರ್ಕವನ್ನೇ ಕಳಕೊಳ್ಳುವಂತಾಗಿದೆ. ಗುಡ್ಡತಪ್ಪಲು ಮತ್ತು ಏರುತಗ್ಗಿನ ಭೂಸ್ಥಿತಿಯಿಂದಾಗಿ ಸಾರಿಗೆ ಸಂಚಾರಕ್ಕೆ ಮತ್ತಷ್ಟು ತೊಂದರೆಯಾಗಿದೆ. ಹಳ್ಳಿಪ್ರದೇಶಗಳಿಗೆ ಸುತ್ತುಸುತ್ತಾಗಿ ಹೋಗಲು ಮೈಲುಗಟ್ಟಲೆ ರಸ್ತೆಗಳು ಹೆಚ್ಚಾಗಿ ಬೇಕಾಗುತ್ತವೆ. ಮತ್ತು ಅವನ್ನು ಸರಿಯಾಗಿರಿಸುವ ವೆಚ್ಚಕೂಡಾ ನಮ್ಮಲ್ಲಿ ಅತ್ಯಧಿಕವಾಗಿದೆ.

ಹಳ್ಳಿಪ್ರದೇಶಗಳ ರಸ್ತೆಗಳಿಗಾಗಿ ಸರಕಾರವು ಬೋರ್ಡಿಗೆ ಸ್ವಲ್ಪ ಸಹಾಯಕೊಡುತ್ತದೆ. ಯುದ್ಧಾನಂತರದ ರಸ್ತೆಗಳ ಅಭಿವೃದ್ಧಿ ಗ್ರಾಂಟಿನಿಂದ ಕೆಲವಷ್ಟೆನ ಸಹಾಯ ಸಿಗುತ್ತದೆ. ಆದರೆ ಈ ಸಹಾಯವು ಏನೇನೂ ಸಾಲದು. ಹೊಸ ರಸ್ತೆಗಳನ್ನು ಮಾಡಲು ಎಷ್ಟೊಂದು ಹಣವನ್ನಾದರೂ ವ್ಯಯಿಸುವ ಪರಿಸ್ಥಿತಿಯಲ್ಲಿ ಬೋರ್ಡು ಇಲ್ಲದಿರುವುದರಿಂದ, ಈ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾಗದೆ ಹಾಗೆಯೇ ಉಳಿಯುವಂತಾಗಿದೆ. ಜಿಲ್ಲೆಯ ಈ ಪ್ರಾಮುಖ್ಯ ಪ್ರಶ್ನೆಯ ಕುರಿತು ತಾವು ತಕ್ಕ ಗಮನ ಕೊಡುವಿರೆಂದು ನಂಬುತ್ತೇವೆ. ಅನೇಕೆಷ್ಟೋ ವರ್ಷಗಳ ನಂತರ, ಹೇಗೂ ನಮ್ಮ ಜಿಲ್ಲೆಯ ಜನನಿಬಿಡ ಪ್ರದೇಶವಾದ ಸಮುದ್ರ ಕರಾವಳಿಯ ಮೂರು ನದಿಗಳಿಗೆ ಸೇತುವೆ ಕಟ್ಟುವುದೆಂದಾಯಿತು. ಅವುಗಳಲ್ಲೊಂದರ ಶಂಕುಸ್ಥಾಪನಾ ಸಮಾರಂಭವನ್ನು ತಾವು ಈಗತಾನೆ ನಡಿಸಿರುವಿರಿ. ಈ ಸೇತುವೆಗಳೇನೋ ಪ್ರಾಮುಖ್ಯವಾಗಿರುತ್ತವೆ. ಆದರೆ ಕರಾವಳಿಯ ಎಲ್ಲಾ ನದಿಗಳಿಗೂ ಸೇತುವೆಗಳಾಗಿ, ಜಿಲ್ಲೆಯ ಉದ್ದಕ್ಕೂ ತಡೆಯಿಲ್ಲದ ಸಾರಿಗೆಯ ಸೌಕರ್ಯ ದೊರೆಯದಿದ್ದಲ್ಲಿ, ಈ ಸೇತುವೆಗಳಿಂದ ಜನದಟ್ಟಣೆಯ ಸಮುದ್ರತೀರ ಪ್ರದೇಶಕ್ಕೆ ಹೆಚ್ಚಿನ ಪ್ರಯೋಜನವೇನೂ ದೊರೆಯುವ ಹಾಗಿಲ್ಲೆಂದು ತಿಳಿಸಲಿಚ್ಛಿಸುತ್ತೇವೆ.

ನಮ್ಮ ಬೋರ್ಡು ದೀರ್ಘಸಮಯದಿಂದ ಆರ್ಥಿಕ ಬಿಕ್ಕಟ್ಟಿಗೊಳಗಾಗಿದೆ. ಜನಜಾಗ್ರತಿಯ ಈ ಕಾಲದಲ್ಲಿ, ಜನತೆಯು ಹೆಚ್ಚೆಚ್ಚು ಶಾಲೆ, ಸಂಚಾರಾನುಕೂಲತೆ ಮತ್ತು ವೈದ್ಯಕೀಯ ಸಹಾಯವನ್ನು ಕೇಳುತ್ತಿರುವಾಗ, ಹಣದ ತೀವ್ರ ಕೊರತೆಯಿಂದಾಗಿ ನಮಗೆ ಎಂತಹ ಸಮುದ್ದೇಶ ಮತ್ತು ಉತ್ಸಾಹವಿದ್ದರೂ, ಕೈಕಟ್ಟಿ ಕುಳಿತುಕೊಳ್ಳುವ ಪರಿಸ್ಥಿತಿಯುಂಟಾಗಿದೆ. ನಮ್ಮ ಹೆಚ್ಚಿನ ಎಲಿಮೆಂಟರಿ ಶಾಲೆಗಳ ಕಟ್ಟಡಗಳು ಬಹಳ ಹೀನಾವಸ್ಥೆಯಲ್ಲಿವೆ. ದೇಶದ ಘಟನೆಯಂತೆ, ಇನ್ನು ಐದು ವರ್ಷಗಳೊಳಗೆ, ಪ್ರತಿಯೊಬ್ಬ ಬಾಲಕ-ಬಾಲಕಿಯು ಶಾಲೆಗೆ ಹೋಗಿ, ಅಲ್ಲಿ 6 ವರ್ಷದಿಂದ 14ರ ವರೆಗೆ ಖಡ್ಡಾಯ ಶಿಕ್ಷಣ ಪಡೆಯಬೇಕಾಗಿದೆ. ಮಾತ್ರವಲ್ಲದೆ, ಶಿಕ್ಷಣಕ್ರಮದಲ್ಲಿಯೇ ಮೂಲಭೂತ ಬದಲಾವಣೆಗಳಾಗುತ್ತಿವೆ. ಅಂದಮೇಲೆ, ನಮ್ಮ ಪ್ರಾಥಮಿಕ ಶಾಲೆಗಳನ್ನು ವಿಸ್ತರಿಸಲೇಬೇಕು; ಅನೇಕ ಹಾಯರ್ ಎಲಿಮೆಂಟರಿ ಶಾಲೆಗಳನ್ನು ಸ್ಥಾಪಿಸಬೇಕು. ಈಗಿರುವ ಶಾಲೆಗಳನ್ನೇ ಸುಧಾರಿಸಿ, ಅವುಗಳಿಗೆ ಸರಿಯಾದ ಸಲಕರಣೆಗಳನ್ನೊದಗಿಸುವುದಕ್ಕೇನೇ ಸುಮಾರು ರೂ. 20 ಲಕ್ಷ ಬೇಕು. ಸೆಕೆಂಡರಿ ಶಿಕ್ಷಣದಲ್ಲಿ ಕೂಡಾ, ದ್ವಿಮುಖ (Bifurcated) ವಿದ್ಯಾಕ್ರಮವನ್ನನುಸರಿಸುವುದಕ್ಕಾಗಲಿ, ಕಟ್ಟಡಗಳನ್ನು ವಿಸ್ತರಿಸಲಿಕ್ಕಾಗಲಿ ಸಾಧ್ಯವಾಗಿರುವುದಿಲ್ಲ. ಹಳ್ಳಿಗಳಿಗೆ ವೈದ್ಯಕೀಯ ಸಹಾಯವು ಅತ್ಯಾವಶ್ಯಕವಾಗಿದೆ. ಜಿಲ್ಲೆಯ 60 ಕೇಂದ್ರಗಳಲ್ಲಿ ಆಸ್ಪತ್ರೆ, ಜಾಣಂತಿ ಮತ್ತು ಶಿಶುಸಂಗೋಪನಾ ಕೇಂದ್ರಗಳನ್ನು ತೆರೆಯಬೇಕಾದ ಕೇಳಿಕೆಗಳು ಈಗಲೇ ಬೋರ್ಡಿನ ಮುಂದಿವೆ. ಬೋರ್ಡಿನ ಆರ್ಥಿಕ ಪರಿಸ್ಥಿತಿಯು ಯೋಗ್ಯರೀತಿಯಲ್ಲಿ ಸುಧಾರಿಸಲ್ಪಡದಿದ್ದರೆ, ಜನತೆಗೆ ಅವಶ್ಯಕವಾದ ಈ ಸೌಕರ್ಯಗಳನ್ನೆಲ್ಲ ಒದಗಿಸಲು ಸಾಧ್ಯವಾಗಲಾರದು.

ಮೈಸೂರಿನ ಜೋಗ್‌ನಿಂದ ಜಿಲ್ಲೆಗೆ ವಿದ್ಯುತ್ತನ್ನೊದಗಿಸುವ ಯೋಜನೆಯು ಭರದಿಂದ ಮುನ್ನಡೆಸಲ್ಪಡುತ್ತಿರುವುದು ಅಭಿನಂದನೀಯ. ಆದರೆ ಪ್ರಕೃತದ ಯೋಜನೆಗೆ ಸೇರಿದ ಪ್ರದೇಶಕ್ಕೆ ಒದಗಿಸಲ್ಪಡುವ ಶಕ್ತಿಯನ್ನೆಲ್ಲ ಅದೇ ಪ್ರದೇಶದೊಳಗೇನೇ ಉಪಯೋಗಿಸಲು ಸಾಧ್ಯವಾಗಲಾರದ. ಆದುದರಿಂದ, ಇಡೀ ಜಿಲ್ಲೆಗೆ ಈ ಯೋಜನೆಯನ್ನು ವಿಸ್ತರಿಸುವುದು ಅವಶ್ಯವೆಂದು ಕೇಳಿಕೊಳ್ಳುತ್ತೇವೆ.

ನಮ್ಮ ಪಶ್ಚಿಮ ಕರಾವಳಿಯಲ್ಲೊಂದು ಪ್ರಮುಖ ಬಂದರನ್ನು ಸ್ಥಾಪಿಸಬೇಕೆಂಬ ನಮ್ಮ ಕೇಳಿಕೆಯನ್ನು ಇನ್ನೂ ಕೇಂದ್ರ ಸರಕಾರವು ಪರ್ಯಾಲೋಚಿಸುತ್ತಿದೆ. ಆದುದರಿಂದ, ತಾವು ಈ ವಿಷಯದಲ್ಲಿ ತಮ್ಮ ಪ್ರಭಾವವನ್ನು ಕೇಂದ್ರ ಸರಕಾರದೊಡನೆ ಉಪಯೋಗಿಸಿ, ವ್ಯಾಪಾರ ವ್ಯವಹಾರವು ಅಧಿಕವಾಗುತ್ತಿರುವ ಈ ಕಾಲದಲ್ಲಿ, ನಮ್ಮಲ್ಲಿ ಪ್ರಮುಖ ಬಂದರೊಂದನ್ನು ಸ್ಥಾಪಿಸುವ ಯೋಜನೆಯು ಬೇಗನೆ ಕಾರ್ಯಗತವಾಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

ಸ್ಥಳೀಯ ಸಂಸ್ಥೆಗಳ ಪುನರ್ಘಟನೆಯ ಪ್ರಶ್ನೆಯು ಈಗ ಕೆಲಸಮಯದಿಂದ ಸರಕಾರದ ಮುಂದಿದೆ. ಈ ಸಂಸ್ಥೆಗಳು, ಸ್ಥಳೀಯ ಆಡಳಿತ ವಿಷಯಗಳಲ್ಲಿ, ಜನತೆಯ ಇಚ್ಛೆ, ಆಕಾಂಕ್ಷೆಗಳನ್ನು ಫಲಕಾರಿಯಾಗಿ, ಮತ್ತು ಸಾರ್ಥಕವಾಗಿ ಕಾರ್ಯಗತಗೊಳಿಸುವ ಸಮರ್ಥ ಉಪಕರಣಗಳಾಗುವಂತೆ, ಅವನ್ನು ಯೋಗ್ಯ ನೆಲೆಯಲ್ಲಿ ವ್ಯವಸ್ಥೆಗೊಳಿಸುವುದು ಅವಶ್ಯವಾಗಿದೆ. ಜಿಲ್ಲಾ ಬೋರ್ಡು ಆಕ್ಟು ಮತ್ತು ಆ ಮೇರೆಗೆ ಆಗಾಗ ಮಾಡಲ್ಪಟ್ಟಿರುವ ಕ್ರಮನಿಯಮಗಳ ಕಟ್ಟುನಿಟ್ಟಿನಿಂದಾಗಿ, ಸ್ಥಳೀಯ ಸಂಸ್ಥೆಗಳು ಈಗ ಸಾಕಷ್ಟು ಕರ್ತೃತ್ವಶಕ್ತಿಯಿಂದ ಕಾರ್ಯ ಮುಂದುವರಿಸಲು ಹೆಚ್ಚಿನ ಅವಕಾಶವಿರುವುದಿಲ್ಲ. ಸ್ಥಳೀಯ ಸಂಸ್ಥೆಗಳು ನಿಜವಾದ ಅಧಿಕಾರ ಮತ್ತು ಹೊಣೆಪಡೆದು ಆಡಳಿತ ನಡಿಸುವಂತಾಗದಿದ್ದರೆ, ಅವು ಜನತೆಯಲ್ಲಿ ಆಶೆ-ಆಕಾಂಕ್ಷೆಗಳನ್ನು ಹುಟ್ಟಿಸಿ, ಅವುಗಳನ್ನು ನೆರವೇರಿಸುವ ಸಾಧನವಿಲ್ಲದಿರುವ ಶೋಚನೀಯ ಅವಸ್ಥೆಗೊಳಗಾಗಬೇಕಾಗುವುದು. ಜಿಲ್ಲಾ ಬೋರ್ಡುಗಳು ಈಗಿರುವಂತೆಯೇ ಮುಂದುವರಿಸಲ್ಪಡಲಿ ಅಥವಾ ಇಲ್ಲದಿರಲಿ, ಅವುಗಳಿಗೆ ಹೆಚ್ಚಿನ ಆಡಳಿತ ಸ್ವಾತಂತ್ರ್ಯಬೇಕು. ಆಡಳಿತವನ್ನು ಫಲಕಾರಿಯಾಗಿ ಕಾರ್ಯಕ್ಕೆ ತರುವ ಬೇರೆಬೇರೆ ಖಾತೆಗಳ ಮೇಲೆ ಅವಕ್ಕೆ ಹೆಚ್ಚಿನ ನಿಯಂತ್ರಣಬೇಕು.

ತಮ್ಮ ಅಪೂರ್ವ ಸಂದರ್ಶನದ ಈ ಮಧುರ ಸಮ್ಮಿಲನದ ಸಂದರ್ಭದಲ್ಲಿ, ನಮ್ಮ ಇತರ ಹಲವು ಕೇಳಿಕೆಗಳ ಕಿರುಕುಳದಿಂದ ತಮ್ಮನ್ನು ಬೇಸರಗೊಳಿಸಲು ನಾವು ಇಷ್ಟಪಡುವುದಿಲ್ಲ. ತಾವೀಗ ಸ್ವತಃ ಜಿಲ್ಲೆಯ ಹಲವು ಭಾಗಗಳನ್ನು ಸಂದರ್ಶಿಸಿರುವಿರಿ. ತಾವು ಬಹಳ ದಕ್ಷತೆಯಿಂದ ಆಡಳಿತ ನಡಿಸುವ ರಾಜ್ಯದ ಅತಿ ದೂರವಾದೊಂದು ಮೂಲೆಯಲ್ಲಿರುವ ನಮ್ಮ ಜಿಲ್ಲೆಯ ಹಲವು ಆವಶ್ಯಕತೆಗಳು ತಮಗೆ ಇಷ್ಟರಲ್ಲೇ ಮನವರಿಕೆಯಾಗಿರಬಹುದು. ಆ ಕುರಿತು ತಾವು ಸಹಾನುಭೂತಿಯಿಂದ ಗಮನವಿತ್ತು, ಕಾಲಾನುಭಾಗದಲ್ಲಿ ಅವೆಲ್ಲ ಪೂರೈಸಲ್ಪಡುವಂತಾಗಲೆಂದೂ, ಅದರಿಂದಾಗಿ ತಮ್ಮೀ ಸಂದರ್ಶನವು ಚಿರಸ್ಮರಣೀಯವಾಗುವಂತಾಗಲೆಂದೂ ಹಾರೈಸುತ್ತೇವೆ.

ನಮ್ಮಿ ಒಲವಿನ ಮಾನಪತ್ರವನ್ನು ಸ್ವೀಕರಿಸಿ, ನಮ್ಮೊಡನೆ ಸಮ್ಮಿಳಿತವಾಗುವ ಈ ಗೌರವವನ್ನು ನಮಗೊದಗಿಸಿ ಕೊಟ್ಟುದಕ್ಕಾಗಿ ನಾವು ನಿಮಗೆ ತುಂಬಾ ಋಣಿಗಳು. ನಮ್ಮ ಮತ್ತು ತಮಿಳುನಾಡಿನ ಘನಜನಾಂಗದ ಸಂಬಂಧವು ಬಹು ಪುರಾತನವಾದುದು. ನಮ್ಮೊಳಗಿನ ಇತ್ತೀಚೆಗಿನ ಸಂಪರ್ಕ ಕೂಡಾ ಮಧುರವಾದುದು. ನಮ್ಮ ಜಿಲ್ಲೆಯ ಮುಂದಿನ ಸ್ಥಾನವೇನಾಗುವುದೆಂದು ಹೇಳಬರುವುದಿಲ್ಲ. ಅದೇನೇ ಇರಲಿ, ನಮ್ಮ ಜಿಲ್ಲೆ ಮತ್ತು ಜನತೆಯ ವಿಷಯದಲ್ಲಿ ತಾವು ಯಾವಾಗಲೂ ಪ್ರೀತಿ ಮತ್ತು ವಿಶ್ವಾಸವು ಳ್ಳವರಾಗಿರಬೇಕೆಂದು ಬೇಡಿಕೊಳ್ಳುತ್ತೇವೆ. ಮತ್ತು ತಮ್ಮೀ ಸಂದರ್ಶನದಿಂದೊಯ್ಯುವ ಮಧುರ ಸ್ಮರಣೆಯು ಅದಕ್ಕೆ ಸಾಕಷ್ಟು ಪೋಷಕವಾಗುವುದೆಂದು ನಂಬುತ್ತೇವೆ.

ನಮ್ಮ ಜನ್ಮಭೂಮಿಯ ಮತ್ತು ಮದ್ರಾಸ್ ರಾಜ್ಯದ ನಿಷ್ಠಾವಂತ ಹಾಗೂ ವೈಭವಯುಕ್ತ ಸೇವೆಯನ್ನು ತಾವು ಇನ್ನೂ ಬಹುಕಾಲ ನಡಿಸಿ ಕೃತಕೃತ್ಯರಾಗುವಂತೆ ಭಗವಂತನು ಅನುಗ್ರಹಿಸಲೆಂದು ಪ್ರಾರ್ಥಿಸುವ,

ತಮ್ಮವರಾದ,

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಆಫೀಸು,
ಮಂಗಳೂರು-1,
೨೯-೪-೫೫.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು
ಅಧ್ಯಕ್ಷ ಮತ್ತು ಸದಸ್ಯರು.

CM 13 MAY 1955 GOVERNMENT

ಮದ್ರಾಸು ಸರಕಾರದ ಮುಖ್ಯ ಮಂತ್ರಿ

ಮಾನ್ಯ ಶ್ರೀ ಕೆ. ಕಾಮರಾಜ ನಾಡಾರವರಿಗೆ

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಅಧ್ಯಕ್ಷರು ಮತ್ತು ಸದಸ್ಯರು

DEPUTY SECRETARY TO GOVERNMENT 14 MAY 1955 PUBLIC WORKS DEPARTMENT

✦ ಅರ್ಪಿಸುವ ✦

ಮಾನಪತ್ರ

ಮಾನ್ಯ ಮಾನನೀಯರೇ,

ನಮ್ಮ ಜಿಲ್ಲೆಗೆ ಇದೀಗ ತಮ್ಮ ಪ್ರಥಮ ಸಂದರ್ಶನ. ಈ ಅಪೂರ್ವ ಸಂದರ್ಭದಲ್ಲಿ, ನಾವು ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಅಧ್ಯಕ್ಷರೂ, ಸದಸ್ಯರೂ ತಮಗೆ ಮಾನಪತ್ರವಿತ್ತು ಗೌರವಿಸಲು ಮನಃಪೂರ್ವಕವಾಗಿ ಆನಂದ ಮತ್ತು ಹೆಮ್ಮೆಪಡುತ್ತೇವೆ. ಯಾಕೆಂದರೆ, ಜನತೆಯ ನಿಜ ಸ್ನೇಹ ಮತ್ತು ನಿಷ್ಠಾವಂತ ಸೇವೆಯ ಪ್ರತಿಮೂರ್ತಿಯಾಗಿ; ಸಾಮಾನ್ಯರೊಬ್ಬರಾದ ತಾವು ರಾಜ್ಯದ ಅತ್ಯುಚ್ಚ ಸ್ಥಾನವನ್ನು ಅಲಂಕರಿಸಿರುವಿರಿ.

ತಾವು ನಮ್ಮ ಜಿಲ್ಲೆಗೆ ಬರುವುದಿದು ಮೊದಲಬಾರಿಯಾದರೂ, ನಮಗೇನೂ ಅಪರಿಚಿತರಲ್ಲ. ಮಾತೃಭೂಮಿಗಾಗಿ ತಾವು ಸಲ್ಲಿಸಿರುವ ಅಮೂಲ್ಯಸೇವೆಯನ್ನು ನಾವು ಬಲ್ಲೆವು. 1920ರಷ್ಟು ಹಿಂದೆ; ಗಾಂಧೀಜಿಯು ನಮ್ಮ ರಾಷ್ಟ್ರೀಯ ಹೋರಾಟದ ನಾಯಕತ್ವವಹಿಸಿ, ಅಸಹಕಾರ ಚಳವಳಿ ಹೂಡಿದಾಗಲೆ, ಸ್ವಾತಂತ್ರ್ಯಸಮರದಲ್ಲಿ ಭಾಗವಹಿಸಿದ ಮೊದಲಿಗರಲ್ಲಿ ತಾವೊಬ್ಬರು. ಅಂದಿನಿಂದ ಸ್ವಾತಂತ್ರ್ಯ ಹೋರಾಟದ ಪ್ರತಿಯೊಂದು ರಂಗದಲ್ಲಿಯೂ ತಾವು ಮುಂದಾಳಾಗಿನಿಂತು, ಎಂತಹ ಕಷ್ಟಕ್ಕಾದರೂ ಪದೆಗೊಟ್ಟು, ಪ್ರತಿಸಲವೂ ಸಂತೋಷದಿಂದ ಸೆರೆಮನೆ ಸೇರಿರುತ್ತೀರಿ. ತಮಿಳುನಾಡು ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ, ಅಖಿಲ ಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಾಗಿ ದೇಶಕ್ಕೆ ಮಹತ್ವದ ಸೇವೆಸಲ್ಲಿಸಿರುತ್ತೀರಿ.

ಸ್ವಾತಂತ್ರ್ಯಸಾಧನೆಯನಂತರ ಮದ್ರಾಸ್ ರಾಜ್ಯಸರಕಾರದ ನಾವೆಯನ್ನು ತಾವು ಸುರಕ್ಷಿತವಾಗಿ ಮತ್ತು ಚಾತುರ್ಯದಿಂದ ನಡಿಸುವ ಹೊಣೆಹೊತ್ತು ಸಫಲರಾಗಿರುವಿರಿ. ವಿವಿಧ ಪ್ರದೇಶಗಳಿಂದ ಕೂಡಿದ ಮದ್ರಾಸ್ ರಾಜ್ಯದಲ್ಲಿ, ಕಷ್ಟ ಮತ್ತು ಬಿಕ್ಕಟ್ಟಿನ ಗತ ವರ್ಷಗಳಲ್ಲೆಲ್ಲ, ಸಮರ್ಥ ಪ್ರಜಾಸರಕಾರವೇ ಆಡಳಿತ ನಡಿಸಿಕೊಂಡು ಬಂದುದು, ತಮ್ಮ ಮುತ್ಸದ್ದಿತನ ಮತ್ತು ರಾಜನೀತಿಜ್ಞತೆಯನ್ನು ಎತ್ತಿತೋರಿಸುತ್ತದೆ. ಮದ್ರಾಸ್ ರಾಜ್ಯದ ಮುಖ್ಯಮಂತ್ರಿಯಾಗಿ ಆಡಳಿತ ನಡಿಸಿರುವ ಈ ಅಲ್ಪಾವಧಿಯಲ್ಲಿಯೇ, ತಾವು ಎಷ್ಟೊಂದು ದಕ್ಷ ಆಡಳಿತಗಾರ ಮತ್ತು ಚತುರ ಮುತ್ಸದ್ದಿಯೆಂಬುದನ್ನು ವ್ಯಕ್ತಗೊಳಿಸಿರುವಿರಿ. ಆದರೆ ಇವೆಲ್ಲಕ್ಕಿಂತಲೂ ಮಹತ್ವವಾದುದೆಂದರೆ, ಹಿಂದುಳಿದು ಪತಿತರಾಗಿರುವ, ದುರ್ದೈವಿಗಳಾಗಿ ಯಾತನೆಪಡುತ್ತಿರುವ ತಮ್ಮ ದೇಶಬಂಧುಗಳ ಕುರಿತು ತಮಗಿರುವ ಸ್ವಾಭಾವಿಕ ಸಹಾನುಭೂತಿ. ಈ ಮಹಾಗುಣದಿಂದಾಗಿಯೇ ತಾವು ವಿಶಾಲ ಜನಸಾಮಾನ್ಯರ ಆತ್ಮೀಯರಾಗಿ ಅವರ ಹೃದಯದಲ್ಲಿ ಸಹಜ ಪ್ರತಿಕ್ರಿಯೆಯನ್ನುಂಟುಮಾಡಿರುತ್ತೀರಿ. ವಾಸ್ತವವಾಗಿಯೂ ತಾವು ಕೆಲಸಗಾರರಲ್ಲೆಲ್ಲೀರ್ವ ನಾಯಕ, ನಾಯಕರಲ್ಲೋರ್ವ ಕೆಲಸಗಾರ.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ದೀರ್ಘ ಜೀವಿತಕಾಲದಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳೊಬ್ಬರಿಗೆ ಮಾನಪತ್ರ ವೀಯುವ ಸುಯೋಗ ದೊರೆತಿರುವುದು ಪ್ರಾಯಶಃ ಇದೀಗ ಮೊದಲಬಾರಿ. ಅಂದಮೇಲೆ ಈ ಅಪೂರ್ವ ಸಂದರ್ಭದ ಉಪಯೋಗ ಪಡೆದು, ಮದ್ರಾಸ್ ಸರಕಾರದ ನೆರವಿನಿಂದ ಪರಿಹರಿಸಬೇಕಾದ ನಮ್ಮ ಕೆಲವು ಪ್ರಾಮುಖ್ಯ ಪ್ರಶ್ನೆಗಳನ್ನು ತಮ್ಮ ಗಮನಕ್ಕೆ ತರುವುದು ನಮ್ಮ ಕರ್ತವ್ಯ.

ನಮ್ಮ ಜಿಲ್ಲೆಯಲ್ಲಿ, ಮುಖ್ಯವಾಗಿ ಹಳ್ಳಿಗಳ ಜನಸಮುದಾಯದ ಅನುನಿತ್ಯ ಜೀವನವ್ಯವಹಾರದಲ್ಲಿ, ದೊಡ್ಡ ತಡೆಯಾಗಿ ಬರುವ ವಿಷಯವೆಂದರೆ, ಸರಿಯಾದ ಸಂಚಾರಾನುಕೂಲತೆಯ ಕೊರತೆ. ಜಿಲ್ಲೆಯಲ್ಲಿ ಸಂಚಾರಾನುಕೂಲತೆಯು ಎಷ್ಟೊಂದು ಕಡಿಮೆ ಹಾಗೂ ಕಷ್ಟವಾಗಿರುವುದೆಂಬುದನ್ನು, ಇದೀಗ ಕೆಲವು ದಿನಗಳ ತಮ್ಮ ಜಿಲ್ಲಾ ಸಂಚಾರದಿಂದ ತಾವು ಮನಗಂಡಿರಬಹುದು. ನಮ್ಮಲ್ಲಿ 1500 ಮೈಲುಗಳಷ್ಟರ ರಸ್ತೆಗಳಿರುವನೆಂಬುದೇನೋ ನಿಜ. ಆದರೆ ಅವುಗಳ ನಡುವೆ ನೂರಾರು ನದಿ, ಉಪನದಿ, ಮತ್ತು ತೋಡುಗಳು ಅಡ್ಡವಾಗಿ ಹರಿಯುವುದರಿಂದ, ಒಳಪ್ರದೇಶದ ಹಳ್ಳಿಗಳಿಗೂ, ಜಿಲ್ಲೆಯ ಪ್ರಾಮುಖ್ಯ ವ್ಯಾಪಾರ ವ್ಯವಹಾರಕೇಂದ್ರಗಳಿಗೂ ಸರಿಯಾದ ಸಂಪರ್ಕ ಇಲ್ಲದಂತಾಗಿದೆ. ಸಾಕಷ್ಟು ಸೇತುವೆ-ಸಂಕಗಳಿಲ್ಲದೆ, ಮಳೆಗಾಲದಲ್ಲಿ ಜಿಲ್ಲೆಯ ವಿಶಾಲಪ್ರದೇಶಗಳು ಹೊರ ಸಂಪರ್ಕವನ್ನೇ ಕಳಕೊಳ್ಳುವಂತಾಗಿದೆ. ಗುಡ್ಡತಪ್ಪಲು ಮತ್ತು ಏರುತಗ್ಗಿನ ಭೂಸ್ಥಿತಿಯಿಂದಾಗಿ ಸಾರಿಗೆ ಸಂಚಾರಕ್ಕೆ ಮತ್ತಷ್ಟು ತೊಂದರೆಯಾಗಿದೆ. ಹಳ್ಳಿಪ್ರದೇಶಗಳಿಗೆ ಸುತ್ತುಸುತ್ತಾಗಿ ಹೋಗಲು ಮೈಲುಗಟ್ಟಲೆ ರಸ್ತೆಗಳು ಹೆಚ್ಚಾಗಿ ಬೇಕಾಗುತ್ತವೆ. ಮತ್ತು ಅವನ್ನು ಸರಿಯಾಗಿರಿಸುವ ವೆಚ್ಚಕೂಡಾ ನಮ್ಮಲ್ಲಿ ಅತ್ಯಧಿಕವಾಗಿದೆ.

ಹಳ್ಳಿಪ್ರದೇಶಗಳ ರಸ್ತೆಗಳಿಗಾಗಿ ಸರಕಾರವು ಬೋರ್ಡಿಗೆ ಸ್ವಲ್ಪ ಸಹಾಯಕೊಡುತ್ತದೆ. ಯುದ್ಧಾನಂತರದ ರಸ್ತೆಗಳ ಅಭಿವೃದ್ಧಿ ಗ್ರಾಂಟಿನಿಂದ ಕೆಲಮಟ್ಟಿನ ಸಹಾಯ ಸಿಗುತ್ತದೆ. ಆದರೆ ಈ ಸಹಾಯವು ಏನೇನೂ ಸಾಲದು. ಹೊಸ ರಸ್ತೆಗಳನ್ನು ಮಾಡಲು ಎಷ್ಟೊಂದು ಹಣವನ್ನಾದರೂ ವ್ಯಯಿಸುವ ಪರಿಸ್ಥಿತಿಯಲ್ಲಿ ಬೋರ್ಡು ಇಲ್ಲದಿರುವುದರಿಂದ, ಈ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾಗದೆ ಹಾಗೆಯೇ ಉಳಿಯುವಂತಾಗಿದೆ. ಜಿಲ್ಲೆಯ ಈ ಪ್ರಾಮುಖ್ಯ ಪ್ರಶ್ನೆಯ ಕುರಿತು ತಾವು ತಕ್ಕ ಗಮನ ಕೊಡುವಿರೆಂದು ನಂಬುತ್ತೇವೆ. ಅವೆಷ್ಟೋ ವರ್ಷಗಳ ನಂತರ, ಹೇಗೂ ನಮ್ಮ ಜಿಲ್ಲೆಯ ಜನನಿಬಿಡ ಪ್ರದೇಶವಾದ ಸಮುದ್ರ ಕರಾವಳಿಯ ಮೂರು ನದಿಗಳಿಗೆ ಸೇತುವೆ ಕಟ್ಟುವುದೆಂದಾಯಿತು. ಅವುಗಳಲ್ಲೊಂದರ ಶಂಕುಸ್ಥಾಪನಾ ಸಮಾರಂಭವನ್ನು ತಾವು ಈಗತಾನೆ ನಡಿಸಿರುವಿರಿ. ಈ ಸೇತುವೆಗಳೇನೋ ಪ್ರಾಮುಖ್ಯವಾಗಿರುತ್ತವೆ. ಆದರೆ ಕರಾವಳಿಯ ಎಲ್ಲಾ ನದಿಗಳಿಗೂ ಸೇತುವೆಗಳಾಗಿ, ಜಿಲ್ಲೆಯ ಉದ್ದಕ್ಕೂ ತಡೆಯಿಲ್ಲದ ಸಾರಿಗೆಯ ಸೌಕರ್ಯ ದೊರೆಯದಿದ್ದಲ್ಲಿ, ಈ ಸೇತುವೆಗಳಿಂದ ಜನದಟ್ಟಣೆಯ ಸಮುದ್ರತೀರ ಪ್ರದೇಶಕ್ಕೆ ಹೆಚ್ಚಿನ ಪ್ರಯೋಜನವೇನೂ ದೊರೆಯುವ ಹಾಗಿಲ್ಲೆಂದು ತಿಳಿಸಲಚ್ಚಿಸುತ್ತೇವೆ.

ನಮ್ಮ ಬೋರ್ಡು ದೀರ್ಘಸಮಯದಿಂದ ಆರ್ಥಿಕ ಬಿಕ್ಕಟ್ಟಿಗೊಳಗಾಗಿದೆ. ಜನಜಾಗ್ರತಿಯ ಈ ಕಾಲದಲ್ಲಿ, ಜನತೆಯು ಹೆಚ್ಚೆಚ್ಚು ಶಾಲೆ, ಸಂಚಾರನುಕೂಲತೆ ಮತ್ತು ವೈದ್ಯಕೀಯ ಸಹಾಯವನ್ನು ಕೇಳುತ್ತಿರುವಾಗ, ಹಣದ ತೀವ್ರ ಕೊರತೆಯಿಂದಾಗಿ ನಮಗೆ ಎಂತಹ ಸದುದ್ದೇಶ ಮತ್ತು ಉತ್ಸಾಹವಿದ್ದರೂ, ಕೈಕಟ್ಟಿ ಕುಳಿತುಕೊಳ್ಳುವ ಪರಿಸ್ಥಿತಿಯುಂಟಾಗಿದೆ. ನಮ್ಮ ಹೆಚ್ಚಿನ ಎಲಿಮೆಂಟರಿ ಶಾಲೆಗಳ ಕಟ್ಟಡಗಳು ಬಹಳ ಹೀನಾವಸ್ಥೆಯಲ್ಲಿವೆ. ದೇಶದ ಘಟನೆಯಂತೆ, ಇನ್ನು ಐದು ವರ್ಷಗಳೊಳಗೆ, ಪ್ರತಿಯೊಬ್ಬ ಬಾಲಕ-ಬಾಲಕಿಯು ಶಾಲೆಗೆ ಹೋಗಿ, ಅಲ್ಲಿ 6 ವರ್ಷದಿಂದ 14ರ ವರೆಗೆ ಕಡ್ಡಾಯ ಶಿಕ್ಷಣ ಪಡೆಯಬೇಕಾಗಿದೆ. ಮಾತ್ರವಲ್ಲದೆ, ಶಿಕ್ಷಣಕ್ರಮದಲ್ಲಿಯೇ ಮೂಲಭೂತ ಬದಲಾವಣೆಗಳಾಗುತ್ತಿವೆ. ಅಂದಮೇಲೆ, ನಮ್ಮ ಪ್ರಾಥಮಿಕ ಶಾಲೆಗಳನ್ನು ವಿಸ್ತರಿಸಲೇಬೇಕು; ಅನೇಕ ಹಾಯರ್ ಎಲಿಮೆಂಟರಿ ಶಾಲೆಗಳನ್ನು ಸ್ಥಾಪಿಸಬೇಕು. ಈಗಿರುವ ಶಾಲೆಗಳನ್ನೇ ಸುಧಾರಿಸಿ, ಅವುಗಳಿಗೆ ಸರಿಯಾದ ಸಲಕರಣೆಗಳನ್ನೊದಗಿಸುವುದಕ್ಕೇನೇ ಸುಮಾರು ರೂ. 20 ಲಕ್ಷ ಬೇಕು. ಸೆಕೆಂಡರಿ ಶಿಕ್ಷಣದಲ್ಲಿ ಕೂಡಾ, ದ್ವಿಮುಖ (Bifurcated) ವಿದ್ಯಾಕ್ರಮವನ್ನನುಸರಿಸುವುದಕ್ಕಾಗಲಿ, ಕಟ್ಟಡಗಳನ್ನು ವಿಸ್ತರಿಸಲಿಕ್ಕಾಗಲಿ ಸಾಧ್ಯವಾಗಿರುವುದಿಲ್ಲ. ಹಳ್ಳಿಗಳಿಗೆ ವೈದ್ಯಕೀಯ ಸಹಾಯವು ಅತ್ಯಾವಶ್ಯಕವಾಗಿದೆ. ಜಿಲ್ಲೆಯ 60 ಕೇಂದ್ರಗಳಲ್ಲಿ ಆಸ್ಪತ್ರೆ, ಬಾಣಂತಿ ಮತ್ತು ಶಿಶುಸಂಗೋಪನಾ ಕೇಂದ್ರಗಳನ್ನು ತೆರೆಯಬೇಕಾದ ಕೇಳಿಕೆಗಳು ಈಗಲೇ ಬೋರ್ಡಿನ ಮುಂದಿವೆ. ಬೋರ್ಡಿನ ಆರ್ಥಿಕ ಪರಿಸ್ಥಿತಿಯು ಯೋಗ್ಯರೀತಿಯಲ್ಲಿ ಸುಧಾರಿಸಲ್ಪಡದಿದ್ದರೆ, ಜನತೆಗೆ ಆವಶ್ಯಕವಾದ ಈ ಸೌಕರ್ಯಗಳನ್ನೆಲ್ಲ ಒದಗಿಸಲು ಸಾಧ್ಯವಾಗಲಾರದು.

ಮೈಸೂರಿನ ಜೋಗ್‌ನಿಂದ ಜಿಲ್ಲೆಗೆ ವಿದ್ಯುತ್ತನ್ನೊದಗಿಸುವ ಯೋಜನೆಯು ಭರದಿಂದ ಮುನ್ನಡೆಸಲ್ಪಡುತ್ತಿರುವುದು ಅಭಿನಂದನೀಯ. ಆದರೆ ಪ್ರಕೃತದ ಯೋಜನೆಗೆ ಸೇರಿದ ಪ್ರದೇಶಕ್ಕೆ ಒದಗಿಸಲ್ಪಡುವ ಶಕ್ತಿಯನ್ನೆಲ್ಲ ಅದೇ ಪ್ರದೇಶದೊಳಗೇನೇ ಉಪಯೋಗಿಸಲು ಸಾಧ್ಯವಾಗಲಾರದು. ಆದುದರಿಂದ, ಇಡೀ ಜಿಲ್ಲೆಗೆ ಈ ಯೋಜನೆಯನ್ನು ವಿಸ್ತರಿಸುವುದು ಅವಶ್ಯವೆಂದು ಕೇಳಿಕೊಳ್ಳುತ್ತೇವೆ.

ನಮ್ಮ ಪಶ್ಚಿಮ ಕರಾವಳಿಯಲ್ಲೊಂದು ಪ್ರಮುಖ ಬಂದರನ್ನು ಸ್ಥಾಪಿಸಬೇಕೆಂಬ ನಮ್ಮ ಕೇಳಿಕೆಯನ್ನು ಇನ್ನೂ ಕೇಂದ್ರ ಸರಕಾರವು ಪರ್ಯಾಲೋಚಿಸುತ್ತಿದೆ. ಆದುದರಿಂದ, ತಾವು ಈ ವಿಷಯದಲ್ಲಿ ತಮ್ಮ ಪ್ರಭಾವವನ್ನು ಕೇಂದ್ರ ಸರಕಾರದೊಡನೆ ಉಪಯೋಗಿಸಿ, ವ್ಯಾಪಾರ ವ್ಯವಹಾರವು ಅಧಿಕವಾಗುತ್ತಿರುವ ಈ ಕಾಲದಲ್ಲಿ, ನಮ್ಮಲ್ಲಿ ಪ್ರಮುಖ ಬಂದರೊಂದನ್ನು ಸ್ಥಾಪಿಸುವ ಯೋಜನೆಯು ಬೇಗನೆ ಕಾರ್ಯಗತವಾಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

ಸ್ಥಳೀಯ ಸಂಸ್ಥೆಗಳ ಪುನರ್ಘಟನೆಯ ಪ್ರಶ್ನೆಯು ಈಗ ಕೆಲಸಮಯದಿಂದ ಸರಕಾರದ ಮುಂದಿದೆ. ಈ ಸಂಸ್ಥೆಗಳು, ಸ್ಥಳೀಯ ಆಡಳಿತ ವಿಷಯಗಳಲ್ಲಿ, ಜನತೆಯ ಇಚ್ಛೆ, ಆಕಾಂಕ್ಷೆಗಳನ್ನು ಫಲಕಾರಿಯಾಗಿ, ಮತ್ತು ಸಾರ್ಥಕವಾಗಿ ಕಾರ್ಯಗತಗೊಳಿಸುವ ಸಮರ್ಥ ಉಪಕರಣಗಳಾಗುವಂತೆ, ಅವನ್ನು ಯೋಗ್ಯ ನೆಲೆಯಲ್ಲಿ ವ್ಯವಸ್ಥೆಗೊಳಿಸುವುದು ಅವಶ್ಯವಾಗಿದೆ. ಜಿಲ್ಲಾ ಬೋರ್ಡು ಆಕ್ಟು ಮತ್ತು ಆ ಮೇರೆಗೆ ಆಗಾಗ ಮಾಡಲ್ಪಟ್ಟಿರುವ ಕ್ರಮನಿಯಮಗಳ ಕಟ್ಟುನಿಟ್ಟಿನಿಂದಾಗಿ, ಸ್ಥಳೀಯ ಸಂಸ್ಥೆಗಳು ಈಗ ಸಾಕಷ್ಟು ಕರ್ತೃತ್ವಶಕ್ತಿಯಿಂದ ಕಾರ್ಯ ಮುಂದುವರಿಸಲು ಹೆಚ್ಚಿನ ಅವಕಾಶವಿರುವುದಿಲ್ಲ. ಸ್ಥಳೀಯ ಸಂಸ್ಥೆಗಳು ನಿಜವಾದ ಅಧಿಕಾರ ಮತ್ತು ಹೊಣೆಪಡೆದು ಆಡಳಿತ ನಡಿಸುವಂತಾಗದಿದ್ದರೆ, ಅವು ಜನತೆಯಲ್ಲಿ ಆಶೆ-ಆಕಾಂಕ್ಷೆಗಳನ್ನು ಹುಟ್ಟಿಸಿ, ಅವುಗಳನ್ನು ನಿರವೇರಿಸುವ ಸಾಧನವಿಲ್ಲದಿರುವ ಶೋಚನೀಯ ಅವಸ್ಥೆಗೊಳಗಾಗಬೇಕಾಗುವುದು. ಜಿಲ್ಲಾ ಬೋರ್ಡುಗಳು ಈಗಿರುವಂತೆಯೇ ಮುಂದುವರಿಸಲ್ಪಡಲಿ ಅಥವಾ ಇಲ್ಲದಿರಲಿ, ಅವುಗಳಿಗೆ ಹೆಚ್ಚಿನ ಆಡಳಿತ ಸ್ವಾತಂತ್ರ್ಯಬೇಕು. ಆಡಳಿತವನ್ನು ಫಲಕಾರಿಯಾಗಿ ಕಾರ್ಯಕ್ಕೆ ತರುವ ಬೇರೆಬೇರೆ ಖಾತೆಗಳ ಮೇಲೆ ಅವಕ್ಕೆ ಹೆಚ್ಚಿನ ನಿಯಂತ್ರಣಬೇಕು.

ತಮ್ಮ ಅಪೂರ್ವ ಸಂದರ್ಶನದ ಈ ಮಧುರ ಸಮ್ಮಿಲನದ ಸಂದರ್ಭದಲ್ಲಿ, ನಮ್ಮ ಇತರ ಹಲವು ಕೇಳಿಕೆಗಳ ಕಿರುಕುಳದಿಂದ ತಮ್ಮನ್ನು ಬೇಸರಗೊಳಿಸಲು ನಾವು ಇಷ್ಟಪಡುವುದಿಲ್ಲ. ತಾವೀಗ ಸ್ವತಃ ಜಿಲ್ಲೆಯ ಹಲವು ಭಾಗಗಳನ್ನು ಸಂದರ್ಶಿಸಿರುವಿರಿ. ತಾವು ಬಹಳ ದಕ್ಷತೆಯಿಂದ ಆಡಳಿತ ನಡಿಸುವ ರಾಜ್ಯದ ಅತಿ ದೂರವಾದೊಂದು ಮೂಲೆಯಲ್ಲಿರುವ ನಮ್ಮ ಜಿಲ್ಲೆಯ ಹಲವು ಆವಶ್ಯಕತೆಗಳು ತಮಗೆ ಇಷ್ಟರಲ್ಲೇ ಮನವರಿಕೆಯಾಗಿರಬಹುದು. ಆ ಕುರಿತು ತಾವು ಸಹಾನುಭೂತಿಯಿಂದ ಗಮನವಿತ್ತು, ಕಾಲಾನುಭಾಗದಲ್ಲಿ ಅವೆಲ್ಲ ಪೂರೈಸಲ್ಪಡುವಂತಾಗಲೆಂದೂ, ಅದರಿಂದಾಗಿ ತಮ್ಮ ಸಂದರ್ಶನವು ಚಿರಸ್ಮರಣೀಯವಾಗುವಂತಾಗಲೆಂದೂ ಹಾರೈಸುತ್ತೇವೆ.

ನಮ್ಮ ಒಲವಿನ ಮಾನಪತ್ರವನ್ನು ಸ್ವೀಕರಿಸಿ, ನಮ್ಮೊಡನೆ ಸಮ್ಮಿಳಿತವಾಗುವ ಈ ಗೌರವವನ್ನು ನಮಗೊದಗಿಸಿ ಕೊಟ್ಟುದಕ್ಕಾಗಿ ನಾವು ನಿಮಗೆ ತುಂಬಾ ಋಣಿಗಳು. ನಮ್ಮ ಮತ್ತು ತಮಿಳುನಾಡಿನ ಘನಜನಾಂಗದ ಸಂಬಂಧವು ಬಹು ಪುರಾತನವಾದುದು. ನಮ್ಮೊಳಗಿನ ಇತ್ತೀಚೆಗಿನ ಸಂಪರ್ಕ ಕೂಡಾ ಮಧುರವಾದುದು. ನಮ್ಮ ಜಿಲ್ಲೆಯ ಮುಂದಿನ ಸ್ಥಾನವೇನಾಗುವುದೆಂದು ಹೇಳಬರುವುದಿಲ್ಲ. ಅದೇನೇ ಇರಲಿ, ನಮ್ಮ ಜಿಲ್ಲೆ ಮತ್ತು ಜನತೆಯ ವಿಷಯದಲ್ಲಿ ತಾವು ಯಾವಾಗಲೂ ಪ್ರೀತಿ ಮತ್ತು ವಿಶ್ವಾಸವು ಳ್ಳವರಾಗಿರಬೇಕೆಂದು ಬೇಡಿಕೊಳ್ಳುತ್ತೇವೆ. ಮತ್ತು ತಮ್ಮ ಸಂದರ್ಶನದಿಂದೊಯ್ಯುವ ಮಧುರ ಸ್ಮರಣೆಯು ಅದಕ್ಕೆ ಸಾಕಷ್ಟು ಪೋಷಕವಾಗುವುದೆಂದು ನಂಬುತ್ತೇವೆ.

ನಮ್ಮ ಜನ್ಮಭೂಮಿಯ ಮತ್ತು ಮದ್ರಾಸ್ ರಾಜ್ಯದ ನಿಷ್ಠಾವಂತ ಹಾಗೂ ವೈಭವಯುಕ್ತ ಸೇವೆಯನ್ನು ತಾವು ಇನ್ನೂ ಬಹುಕಾಲ ನಡಿಸಿ ಕೃತಕೃತ್ಯರಾಗುವಂತೆ ಭಗವಂತನು ಅನುಗ್ರಹಿಸಲೆಂದು ಪ್ರಾರ್ಥಿಸುವ,

ತಮ್ಮವರಾದ,

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು

ಅಧ್ಯಕ್ಷ ಮತ್ತು ಸದಸ್ಯರು.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಆಫೀಸು,
ಮಂಗಳೂರು-1,
೨೯-೪-೫೫.

KPWM

Memorandum presented by the President and Members of the South Kanara District Board, to Sri K. Kamaraj Nadar, Chief Minister, Madras.

Honourable Sir,

x x x x x

In our district, the main difficulty experienced by the people in the villages in their daily life is the want of proper communications. During the last few days of your tour, you might have come to know how scarce and difficult is the facility for transport. It is true that we have about 1500 miles of roads. But, owing to hundreds of intervening rivers, rivulets and streams, the villages of the interior have lost proper contact with important busine centres of the district. For want of adequate bridges extensive areas of the district are forced to lose cont with the outside world during the rainy season. The rough contours of the landscape have only added to the inadequacy of transport facilities. Additional mileag of roads will be needed to make detours to the villages, and their cost of maintenance is exorbitant in our part.

The Government provides the Board with som help for the upkeep of roads in the villages. Some allotment is made also from the Post War Roads Development Grant. But this does not touch even the fringe of the problem. As the Board is not in a position to spend any money on the construction of new roads, this problem has remained unsolved. We hope that you will give proper consideration to this primary problem of this district. At last, after many years, it was decided that bridges should be constructed over the three rivers of the thic populated coastal area of our district. x x x

p.t.

Of course, these bridges are of great importance to us. But, unless all the rivers of the coast are spanned, and unhindered transport facilities are provided throughout the district, these bridges, we venture to submit, will be of no avail to this densely populated coastal belt.

Our Board has been for a quite a long time, experiencing financial stringecies. Now when there is widespread popular awakening, and a clamour for more schools, transport facilities and medical services, we are not in a position to do anything owing to paucity offunds. Most of our elementary school buildings are in a dilapidated condition. According to the constitution, within the next five years every boy and girl should go to school and get compulsory education from the sixth to the fourteenth year. Fundamental changes are taking place in the educational system. Our primary schools should, therefore, undergo expansion. Numerous higher elementary schools should be established. The improvement of the existing schools and provision of adequate equipment to them alone will require about Rs. ten lakhs. In the matter of secondary education too, it has not been possible to introduce the bifurcated course of education or extend the buildings. Villages are badly in need of Medical help. The Board is already faced with the problem of dealing with the demands for hospitals, and maternity and child welfare centres from 60 centres of the district. If the financial position of the Board is not improved it may not be possible to provide the people with these amenities.

It is a matter of gratification to note that the project for providing electricity to this district from the Jog Falls in Mysore is being implemented. But it may not be possible for the area now included in the present project to utilise all the power sanction It is therefore imperative that this project s

15

be extended to the whole district.

Our demand for the construction of an important port on the west coast is under the consideration of the Central Government. We request you to kindly exert your influence with the Central Government and see to the early inplementation of the scheme.

The question of the reconstitution of the local boards has been before the Government for sometime now. It is imperative that these bodies should be organized on a sound basis so that they may prove to be instrumental in carrying out the desires and aspirations of the people. Because of the restrictions imposed by the District Boards Act and the rules and regulations made from time to time, the scope for the District Boards to function effectively is now very limited. If the Local Boards are deprived of the opportunity of assuming real power and responsibility in administrative matters, then they will be put to the unenviable position of rousing the wishes and aspirations of the people without being able to fulfil them. Whether or not the Local Boards are going to continue as they are at present, they stand in need of greater administrative freedom. They must be able to exercise greater control over those departments which are in charge of administration. x x x.

M. Ke[illegible]
Kannada Translator to Government.

P.W(82)

Please see the translation on pp 7-9 above of the Welcome Address in Kanarese on pp 1-3 ante presented to CM. An English copy of the Address presented to CM. was already received and action taken - Vide notes on pp 4-5 of (N). Hence no action on the present copy is necessary. This may be added to Lodged No. 4334 A/55 dy 23-6-55 at (N).